Regd No BC 155

— ಶ್ರೀ —

14—3—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಸಮಸ್ತ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಆರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಕಯ್ಯಂರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ರಕಣ್ಾಾ ವೆಚದ ಏರಿಕೆ

ನವ ಚೀನ ವುತ್ತು ಪ ಕಿಸ್ತಾನ ಇವುಗಳೊಡನೆ ಭಾಂತದ ಬಿಕ್ಕಟ್ಟು ವ ಂದ ನರಿಯ ಉತ್ತರಾವದರಿಂದ ಅದ ಭಾಂತದ ರಕ್ಷಣಾ ಅಂದಾಜಿನ ವೇಲೆ ಪರಿಣಾಮ ಮಾಡುವ ಸಂಭವವಿದೆ. 61-62 ರಲ್ಲಿ ರಕ್ಷಣಾ ವೆಚ್ಚ ರೂ 282 ಕೋಟಿ ಇದ್ದುದು ವುಂದಿನ ಸಾಲಿನಲ್ಲಿ ರೂ. 300 ಕೋಟಿ ಆಗಬಹುದು

ಮೈಸೂರು ಮಂತ್ರಿಮಂಡಲ

ವಿಶಾಲ ಆಧಾರ ದ ಮಂತ್ರಿ ಮಂಡಲ ರಚನೆ ಪ್ರಯತ್ನ ಬಿರುಸಾಗಿ ನಡೆಯುತ್ತಿದೆ. ಪ್ರಮಾಣ ವಚನ ಸ್ವೀಕರಿಸುವ ಪ್ರಮುಖ ನಾಯಕರು ಹಂಡದ ಮಂತ್ರಿ — ಶ್ರೀಗಳಾದ ಡಾ|| ಕೆ ನಾಗಪ್ಪ ಆಳ್ವ, ಕೆ ಮಲ್ಲಪ್ಪ, ವೀರೇಂದ್ರ ಪಾಟೀಲ್, ಎಂ ವಿ ರಾಮರಾವ್, ಬಿ ರಾಚಯ್ಯ, ಎಂ ವಿ ಕೃಷ್ಣಪ್ಪ ಮತ್ತು ಯಶೋಧಮ್ಮ ದಾಸಪ್ಪ ಎಂದು ವಂದಿಯಾಗಿದೆ. ವಿಶಾಲ ಆಧಾರದಿಂದ ಮಂತ್ರಿಮಂಡಲದ ರಚನೆಯಲ್ಲಿ ಪ್ರಾಯೋಗಿಕ ಕಷ್ಟಗಳಿಂವದಾಗಿ ವಂದಿ

೦೦೦

ಶ್ರೀ ಬಿ ವೈಕುಂಟ ಬಾಳಿಗಾರವರನ್ನು ಸ್ಪೀಕರ್ ಚುನಾವಣೆಗೆ ಕಾಂಗ್ರೆಸಿನ ಸ್ಪರ್ಧಿಯಾಗಿ ನಿಲ್ಲಿಸಲು ಬೆಂಗಳೂರಿನಲ್ಲಿ ನಿನ್ನೆ ಸೇರಿದ್ದ ಶಾಸನ ಸಭೆಯ ಕಾಂಗ್ರೆಸ್ಸು ಪಕ್ಷ ಸರ್ವಾನುಮತದಿಂದ ನಿರ್ಧರಿಸಿದೆ.

ಮೈಸೂರು ರಾಜ್ಯದಲ್ಲಿ ಟಿಬೆಟಿಯನ್ ನಿರಾಶ್ರಿತರ ಕಾಲೋನಿಯನ್ನು ವೀಕ್ಷಿಸಲು ದಲಾಯಿ ಲಾಮಾರವರು ನಿನ್ನೆ ದೆಹಲಿಯಿಂದ ರೈಲಿನಲ್ಲಿ ತೆಂಳಿದರು ಅವರು ಮೈಸೂರಿನಲ್ಲಿ ಒಂದು ವಾರ ಇರುವ ನಿರೀಕ್ಷೆ ಇದೆ.

ಭಾರತದಲ್ಲಿ ರೈಲ್ವೆ ದಂಗಳು ಹಾಗೂ ಪದಾರ್ಥಗಳ ಸಾಗಾಣಿಕೆ ದಂಗಳು ಹೆಚ್ಚುವ ಸೂಚನೆ ಇದೆ.

ಬೆಂಗಳೂರು ೧೩— ಮೈಸೂರು ರಾಜ್ಯವು ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಕಾರ್ಯಾಚರಣೆಯಲ್ಲಿ ತರುವುದಕ್ಕಾಗಿ ಂಧಸದಿಂದ ಕ್ರಮಗಳನ್ನು ಕೈಕೊಂಡಿದೆ — ಈ ಉದ್ದೇಶಕ್ಕಾಗಿ 1767 ಹೊಸ ಶಾಲೆಗಳನ್ನು ತೆರೆಯಲಾಗಿದೆ — ಶಾಲೆಗಳ ಇನಸ್ಪೆಕ್ಟರಂ ದಂಡದ ಕ್ರವ ವನ್ನು ಕೈಕೊಳ್ಳದೆ ಶಾಲೆಗಳಲ್ಲಿ ವ.ಕ್ಯಳ ಸಂಖೆ ಹೆಚ್ಚಿಸುವಲ್ಲಿ ಬಹಳ ಉತ್ಸಾಹದಿಂದ ಕೆಲಸ ಮಾಡಿದ್ದಾರೆ : ಇನಸ್ಪೆಕ್ಟರ ಕಾರ್ಯವನ್ನು ಮೆಚ್ಚಿ ಪ್ರತಿಯೊಂದು ಜಿಲ್ಲೆಯಲ್ಲಿ ಮೂವರು ಅತ್ಯುತ್ತಮ ಇನಸ್ಪೆಕ್ಟರಿಗೆ ಒಂದು ಬಂಗಾರದ ಪದಕ ಮತ್ತು ಪ್ರಶಸ್ತಿಪತ್ರಗಳನ್ನು ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ನವದೆಹಲಿ ೧೩ — ಯಾರೇ ನಿದೇಶಿ ನಿರ್ಮಾಪಕರಾಗಲೀ ಭಾರತದಲ್ಲಿ ಮಹಾತ್ಮಾ ಗಾಂಧಿಯವರ ಜೀವನವನ್ನು ಕುರಿತ ಚಲಚ್ಚಿತ್ರವೊಂದನ್ನು ತಯಾರಿಸುತ್ತಿರುವ ವಿಷಯ ಸರ್ಕಾರದವರಿಗೆ ತಿಳಿಯದು ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

ನವದೆಹಲಿ 13— ಹೈ ಕೋರ್ಟು ನ್ಯಾಯಾಧೀಶರುಗಳ ನಿವೃತ್ತಿ ವಯಸ್ಸನ್ನು 60 ವರ್ಷಗಳಿಂದ 62 ವರ್ಷಗಳವರಿಗೆ ಹೆಚ್ಚಿಸಲು ಸರ್ಕಾರದವರು ಉದ್ದೇಶಿಸಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಕಿವಿ ಕಚ್ಚಿದ

ಬೆಂಗಳೂರು ಮಾವಳ್ಳಿಯ ಕೆಂಪಣ್ಣ ಗಲ್ಲಿಯಲ್ಲಿರುವ ವರ್ಗೀಸ್ ಎಂಬವನು ತನ್ನ ಭಾವನೊಡನೆ ಹಣಕಾಸು ಸಂಬಂಧಪಟ್ಟಂತೆ ಜಗಳವಾಡಿ ಎಡದ ಕಿವಿ ಕಚ್ಚಿದ ಸಂದರ್ಭದಲ್ಲಿ ಅವನ ಭಾವ ಥಾಮಸ್ ಕಿವಿ ಕಿತ್ತುಬಂದಿತು ಪೋಲಿಸರು ನಿನ್ನೆ ನಗರ ನ್ಯಾಯಾಧೀಶರ ಸಮಕ್ಷದಲ್ಲಿ ಚಾರ್ಜುಷೀಟು ಹಾಕಿರುವರು.

ನಿರುದ್ಯೋಗ ಹ್ಯಾಪ್ತಿ

ಹೊಂದಿಸಿದ ಫಲಂ ಮೇಲೆ ಅಧಿಕ ತೆರಿಗೆ ವಿಧಿಸಿದ ಕಾರಣ ಬೊಂಬಾಯಿನಲ್ಲಿ ಈ ವಿಭಾಗದ 12 ಸಹಸ್ರ ಕೆಲಸಗಾರರು ಫೆಬ್ರವರಿ 7 ರಿಂದ ಸಾವಿರ ಜನ ನಿರುದ್ಯೋಗಿಗಳು ಆಗುವರು

ಭಾರಿ ಸಂಖ್ಯೆಯ ಮಂತ್ರಿಮಂಡಲ

ಉತ್ತರ ಪ್ರದೇಶದ ಮಂತ್ರಿಮಂಡಲದಲ್ಲಿ 42 ಮಂದಿ ಸದಸ್ಯರಿರುವರು. ಈ ಸಂಖ್ಯೆಯ ಮಂತ್ರಿಮಂಡಲ ಯಾವಕ್ಕೂ ಇಲ್ಲದ ಭಾರೀ ಸಂಖ್ಯೆಯ ಮಂತ್ರಿಮಂಡಲ

ಶ್ರೀ ಬಾಲಾಜಿಯಾತ್ರಾ ಕಂ

ಕಾ || 21-4-62 ರಲ್ಲಿ
ಬದರೀ, ಕಾಶ್ಮೀರ್, ದ್ವಾರಕ, ಇತ್ಯಾದಿ
70 ದಿನಗಳು, ಜನತಾ ಕ್ಯಾರೇಜಿನಲ್ಲಿ

(2) ಕಾ || 29-4-62
ಟೂರಿಸ್ಟ್ ವುತ್ತು 1 st Class
55 ದಿನಗಳಲ್ಲಿ ಬದರೀ, ಕಾಶ್ಮೀರ್
ಅಜ್ಮೀರ್ ಜೈಪುರ್

— ವಿವರಗಳಿಗೆ —

ಎಂ. ಶುಭಾಶಾಸ್ತ್ರಿ,
ಶುಭಾಲಯ, Poone 3910
ಶ್ರೀ ಕೆಂಗಲ್ ಹನುಮಂತಯ್ಯ ರೋಡ್
ಬೆಂಗಳೂರು 2

ಮಂತ್ರಿಗಳ ವೇತನ

ಪಂಜಾಬಿನ ಮಂತ್ರಿಮಂಡಲದವರ ಸಂಖ್ಯೆ 31 ತಿಂಗಳಿಗೆ ತಲಾ ರೂ. 800 ರಂತೆ ವೇತನ ಪಡೆಯುವ ನಿರ್ಧಾರವನ್ನು ಅವರು ಕೈಗೊಂಡಿರುವರು.

ಅರಮನೆ ಅಶ್ವಶಾಲಾ ಮತ್ತು
ಗಜಶಾಲಾ ಇಲಾಖೆ
ಮೈಸೂರು

ಟೆಂಡರ್ ನೋಟೀಸ್

ಸನ್ 1962-1963 ನೇ ಸಾಲಿನ ತಾ. 1-4-62 ರಿಂದ ತಾ 31-3-1963 ರ ವರೆಗೆ ಮೇಲ್ಕಂಡ ಇಲಾಖೆಯ ನಾಯಿಗಳ ಉಪಯೋಗಕ್ಕಾಗಿ ದಿನವಹ ಶುದ್ಧವಾದ ಕುರಿ ಮಾಂಸ ಮೂಳೆಯು ಸಮೇತ ಮತ್ತು ಮೂಳೆ ಇಲ್ಲದೇ ಇರುವುದು (with bones & without bones) ಲಿವರ್ (Liver) ಕೋಳಿ ಮೊಟ್ಟೆ (Eggs) ಮತ್ತು ನಾನ್‌ರೊಟ್ಟಿ (Bread) ಮುಂತಾದುವುಗಳನ್ನು ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು ಒಂದು ನೂರು ರೂಪಾಯಿ (Rs 100) ಠೇವಣಾತಿಯೊಂದಿಗೆ ವಾರ್ಡ್ ಮಾಹೆ ಹದಿನೈದನೆ ತಾರೀಖು ಅಂದರೆ 15-3-1962 ರ ಮಧ್ಯಾಹ್ನ 12-00 ಘಂಟೆಯೊಳಗಾಗಿ ಇಲಾಖಾ ಆಫೀಸರ್ ಇನ್ ಛಾರ್ಜ್ ರವರಿಗೆ ಕೊಡಕಕ್ಕದ್ದು. ಹೆಚ್ಚಿಗೆ ವಿಷಯಗಳಿಗೆ ಇಲಾಖೆಯಲ್ಲಿ ವಿಚಾರಿಸಿಕೊಳ್ಳಕಕ್ಕದ್ದು.

M. S. Narayanaswamy
Officer in charge.
Palace Stables & Gajasala,
Mysore.

ನಾಳೆಯ ಪಂಚಾಂಗ

ಅಸ್ಮಾನ ಮಹಾವಿದ್ವಾನ್ ದರ್ಮಾಧೀಕಾರಿ
ದೈವಜ್ಞಶಿರೋಮಣಿ
ಪಂಪಶ್ಯಾಸ್ತ್ರಜ್ಯೋಯಿಸರಿಂದ

15 ದಶಮಿ ಪುನರ್ವಸು

ರೈಲ್ವೇ ಬಡ್ಜೆಟ್

ನವದೆಹಲಿ 13— 1992-63 ಂ ರೈಲ್ವೇ ಆಯವ್ಯಯ ಅಂದಾಜುಪಟ್ಟಿಗೆ ಸಂಬಂಧಪಟ್ಟಂತೆ ಶ್ವೇತಪತ್ರ ವೊಂದನ್ನು ಕೇಂದ್ರ ರೈಲ್ವೇ ಮಂತ್ರಿ ಶ್ರೀ ಜಗಜೀವನರಾಮಂವರು ಲೋಕಸಭೆಯ ಮುಂಡೆ ಈ ದಿನ ಮಂಡಿಸಿದರು — 62-63 ರಲ್ಲಿ ಒಟ್ಟು ಆದಾಯ 524-10 ಕೋಟಿ ರೂಗಳಾಗಬಹುದೆಂಬ ಅಂದಾಜುಮಾಡಲಾಗಿದೆ ; ಇದಂಲ್ಲಿ ಪ್ರಯಾಣಿಕರ ಸಂಚಾರದಿಂದಾಗಿ, ಪ್ರಯಾಣದ ಟಿಕೇಟುಗಳ ಮಾರಾಟದಿಂದ, ಒಟ್ಟು 155-00 ಕೋಟಿ ರೂಗಳಷ್ಟು ವರಮಾನ ಬರುತ್ತದೆಂದು ಅಂದಾಜು ಹಾಕಲಾಗಿದೆ — ಕೋಚಿಂಗು ಟ್ರಾಫಿಕ್ ಎಂದರೆ ಪಾರ್ಸಲುಗಳ ರವಾನೆ, ಲಗೇಜು ಶಂಕರಾದಿ ಹಣ್ಣು ಹಂಪಲು ಇತ್ಯಾದಿಗಳ ರವಾನೆ, ಇವುಗಳ ಮೂಲಕ 29 ಕೋಟಿ ರೂಗಳು ಒದಗಿಬರುವ ನಿರೀಕ್ಷೆ ಇದೆ — ಗೂಡ್ಸು ಗಾಡಿಗಳ ಮೂಲಕ ಸರಾಸರಿ 15 ದಶ ಲಕ್ಷ ಟನ್ನುಗಳಷ್ಟು ವಸ್ತುಗಳು 62-63 ರಲ್ಲಿ ರವಾನಿಸಲ್ಪಡುವ ನಿರೀಕ್ಷೆ ಇದೆ ; ಈಗಿನ ರವಾನೆ ದರಗಳ ಆಧಾರದ ಮೇಲೆಯೇ ಹೇಳುವುದಾದರೆ 22-50 ಕೋಟಿ ರೂಗಳಷ್ಟು ಹೆಚ್ಚಿನ ಆದಾಯ ಬರುವ ನಿರೀಕ್ಷೆ ಇದೆ — ಡಿಪ್ರೀಸಿಯೇಷನ್ ರಿಸರ್ವ್ ಫಂಡಿಗೆಂದು 62-63 ರಲ್ಲಿ 67 ಕೋಟಿ ರೂಗಳನ್ನು ಒದಗಿಸಲಾಗುತ್ತದೆ — 62-63 ರಲ್ಲಿ ನಿವ್ವಳ ವರಮಾನದ ಅಂದಾಜು 95 01 ಕೋಟಿ ರೂ — ಸಂಕಲಾದ ಜನರಲ್ ರೆವಿನ್ಯೂ ಬಾಬಿಗೆ ಒದಗಿಸುವ ಹಣ 69-35 ಕೋಟಿ ರೂಗಳಿಗೆ ಹೆಚ್ಚುತ್ತದೆ — ಎಲ್ಲ ಖರ್ಚುಗಳನ್ನು ಕಳೆದುಕೊಂಡು ಕೊನೆಗೆ ರೈಲ್ವೆಗಳಿಗೆ ಉಳಿಯುವ ಉಳಿತಾಯ ಹಣ 62-63 ರಲ್ಲಿ 13-16 ಕೋಟಿ ರೂ ; ಈ ಹಣವನ್ನು ದಘಿವೃದ್ಧಿ ನಿಧಿಗೆ ಹಾಕಲಾಗುತ್ತದೆ — 62-63 ರಲ್ಲಿ ಉಳಿತಾಯ ಹಣಕ್ಕಿಂತ ಹೆಚ್ಚು ಹಣ ಕಾಮಗಾರಿಗಳಿಗೆ ಬೇಕಾಗಿರುವುದರಿಂದ ಸರ್ಕಾರದಿಂದ ತಾತ್ಕಾಲಿಕವಾಗಿ 9-88 ಕೋಟಿ ರೂಗಳಷ್ಟು ಹಣವನ್ನು ಸಾಲವಾಗಿ ಪಡೆಯುವುದು ಅನಿವಾರ್ಯವಾಗುತ್ತದೆ : ಅನ್ಯ ಮಾರ್ಗಗಳಿಂದ ರೈಲ್ವೇ ಆದಾಯ ಹೆಚ್ಚಿಸಿಕೊಳ್ಳುವುದು ಸಾಧ್ಯವಾದರೆ ಮಾತ್ರ ಈ ಅನಿವಾರ್ಯತೆ ತಪ್ಪಬಹುದು.

★

ವಿವಿಧ ವಾರ್ತೆಗಳು

ನವದೆಹಲಿ 13— ಡಾ || ಸಿ ವಿ ರಾಮನ್ನರು ಮಾರ್ಚ್ 14, 15, 16 ರಂದು ಈ ವರ್ಷದ ಆಜಾದ್ ಸ್ಮಾರಕ ಉಪನ್ಯಾಸಗಳನ್ನು ಮಾಡುವರು

೦೦೦೦

ನವದೆಹಲಿ 13— ರಾಜ್ಯದ ಸಧಾನ ಪರಿಷತ್ತಿಗೆ ಏಳು ಜನರನ್ನು ಮೈಸೂರು ಶಾಸನ ಸಭೆಯ ಸದಸ್ಯರು ಮಾರ್ಚ್ 29 ರಂದು ಚುನಾಯಿಸಲಿರುವರು.

೦೦೦೦

ನವದೆಹಲಿ ೧೩— ರಷ್ಯಾದಲ್ಲಿನ ವಿವಿಧ ಸಸ್ಯಗಳ ಮಾದರಿಗಳು, ಬೀಜಗಳು ಮುಂತಾದುವನ್ನು ಸಂಗ್ರಹಿಸುವ ಹಾಗೂ ರಷ್ಯಾದ ಹಲವಾರು ಪ್ರದೇಶಗಳಲ್ಲಿ ಪರಿಶೋಧನೆ ನಡೆಸುವ ಉದ್ದೇಶದಿಂದ ಆರು ಜನ ಭಾರತೀಯ ಸಸ್ಯ ವಿಜ್ಞಾನಿಗಳ ನಿಯೋಗವೊಂದು ಈ ವರ್ಷ ಬೇಸಿಗೆಯ ಕಾಲದಲ್ಲಿ ಆ ರಾಷ್ಟ್ರದಲ್ಲಿ ಪ್ರವಾಸ ಮಾಡುವುದು, ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

SHAKTI SUDHA

A Superb Tonic

ವುಡ್‌ಲಾಂಡ್ಸ್ ಯಶಸ್ವಿ 5 ನೇ ವಾರ

ಈ ಪುನರ್ಮೋಹಕ ಚಿತ್ರವನ್ನು ನೀವು ಇನ್ನೂ ನೋಡದಿದ್ದರೆ ಇಂದೇ ನೋಡಿ

ಜಂಗ್ಲಿ (ಹಿಂದಿ) Junglee

ನಟನಟಿಯರ್— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಆಮೋಘ 3 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ವಾಣಿಜ್ಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು



— — Power for Powerless Areas — —

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.